**All India Radio: Bangalore**
**National Bulletins In Kannada**
**29.08.2025 / 1.10 pm**

**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**29.08.2025 / 1.10 pm**

**<><*<><>*><>**

**ಮುಖ್ಯಾಂಶಗಳು**

೧. ಜಪಾನ್ ತಂತ್ರಜ್ಞಾನ ಮತ್ತು ಭಾರತದ ಪ್ರತಿಭೆಯ ಸಂಯೋಜನೆಯಿಂದ ತಾಂತ್ರಿಕ ಕ್ರಾಂತಿ - ಪ್ರಧಾನಿ ನರೇಂದ್ರ ಮೋದಿ

೨. ಸೆಮಿಕಂಡಕ್ಟರ್ ವಲಯದ ವೃತ್ತಿಪರರ ಕೊರತೆ ನೀಗಿಸಲು ಕ್ರಮ-ಸಚಿವ ಅಶ್ವಿನಿ ವೈಷ್ಣವ್

೩. ಸುಪ್ರೀಂಕೋರ್ಟ್‌ನ ನೂತನ ನ್ಯಾಯಮೂರ್ತಿಗಳಾಗಿ ಅಲೋಕ್ ಅರಾಧೆ ಮತ್ತು ವಿ.ಎಂ.ಪಂಚೋಲಿ ಪ್ರಮಾಣವಚನ ಸ್ವೀಕಾರ

೪. ಇಂದು ರಾಷ್ಟ್ರೀಯ ಕ್ರೀಡಾದಿನ; ಮೂರು ದಿನಗಳ ರಾಷ್ಟ್ರವ್ಯಾಪಿ ಅಭಿಯಾನಕ್ಕೆ ಸಚಿವ ಮನ್ಸೂಖ್ ಮಾಂಡವೀಯ ಚಾಲನೆ

೫. ಇಂದಿನಿಂದ ಪುರುಷರ ಏಷ್ಯಾ ಹಾಕಿ ಕಪ್ ಆರಂಭ; ಮೊದಲ ಪಂದ್ಯದಲ್ಲಿ ಭಾರತ-ಚೀನಾ ಸೆಣಸು

**><><><><><><><><><**

ಭಾರತದ ಪ್ರತಿಭೆ ಮತ್ತು ಜಪಾನ್‌ನ ತಂತ್ರಜ್ಞಾನದ ಸಂಯೋಜನೆಯಿಂದ ಈ ಶತಮಾನದಲ್ಲಿ ತಾಂತ್ರಿಕ ಕ್ರಾಂತಿಯನ್ನು ಮಾಡಬಹುದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಅವರು ಟೋಕಿಯೋದಲ್ಲಿಂದು ೧೫ನೇ ಭಾರತ-ಜಪಾನ್ ವಾರ್ಷಿಕ ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡಿ, ಭಾರತದ ಅಭಿವೃದ್ಧಿ ಪಯಣದಲ್ಲಿ ಜಪಾನ್ ಮೊದಲಿನಿಂದಲೂ ಅತ್ಯಂತ ಪ್ರಮುಖ ಪಾಲುದಾರ ರಾಷ್ಟ್ರವಾಗಿದೆ. ಮೆಟ್ರೋದಿಂದ ಉತ್ಪಾದನೆವರೆಗೆ, ನವೋದ್ಯಮಗಳಿಂದ ಸೆಮಿಕಂಡಕ್ಟರ್‌ವರೆಗೆ ನಾನಾ ವಲಯಗಳಲ್ಲಿ ಜಪಾನ್ ಕಂಪನಿಗಳು ೪೦ ಬಿಲಿಯನ್ ಡಾಲರ್‌ಗೂ ಅಧಿಕ ಬಂಡವಾಳವನ್ನು ಹೂಡಿಕೆ ಮಾಡಿವೆ ಎಂದರು. ಭಾರತ ಬಂಡವಾಳ ಹೂಡಿಕೆಯ ಅತ್ಯಂತ ಭರವಸೆಯ ತಾಣ ಮಾತ್ರವಲ್ಲ, ಇಲ್ಲಿ ಹೂಡಿಕೆ ಕೇವಲ ಬೆಳೆಯುವುದಲ್ಲ, ಅದು ದ್ವಿಗುಣವಾಗಲಿದೆ. ಭಾರತದಲ್ಲಿ ಆರ್ಥಿಕ ಮತ್ತು ರಾಜಕೀಯ ಸ್ಥಿರತೆ ಇದೆ ಹಾಗೂ ನೀತಿಗಳಲ್ಲಿ ಪಾರದರ್ಶಕತೆ ಇದೆ. ಸದ್ಯದಲ್ಲೇ ಭಾರತ ಮೂರನೇ ಅತೀ ದೊಡ್ಡ ಆರ್ಥಿಕ ರಾಷ್ಟ್ರವಾಗಲಿದೆ. ಹಾಗಾಗಿ ಜಪಾನ್ ಕಂಪನಿಗಳು ಭಾರತದಲ್ಲಿ ಬಂಡವಾಳ ಹೂಡಲು ಮುಂದಾಗಬೇಕು ಎಂದು ಪ್ರಧಾನಿ ಮನವಿ ಮಾಡಿದರು.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ, ( ೩೮ ಸೆಕೆಂಡುಗಳು)**

ಜಪಾನ್ ತಾಂತ್ರಿಕ ಶಕ್ತಿ ಕೇಂದ್ರವಾಗಿದೆ ಮತ್ತು ಭಾರತ ಪ್ರತಿಭಾ ಶಕ್ತಿ ಕೇಂದ್ರವಾಗಿದೆ ಎಂದ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ವ್ಯಾಪಾರ ವಹಿವಾಟಿಗೆ ಸುಗಮ ವಾತಾವರಣವನ್ನು ನಿರ್ಮಿಸಿದೆ ಮತ್ತು ಏಕಗವಾಕ್ಷಿ ಡಿಜಿಟಲ್ ಅನುಮೋದನಾ ವ್ಯವಸ್ಥೆಯನ್ನು ಜಾರಿಗೊಳಿಸಿದೆ ಎಂದರು. ಜಪಾನ್‌ನ ಶ್ರೇಷ್ಠತೆ ಮತ್ತು ಭಾರತದ ವ್ಯಾಪ್ತಿ ಅತ್ಯಂತ ಸೂಕ್ತ ಪಾಲುದಾರಿಕೆಯನ್ನು ಸೃಷ್ಟಿಸುತ್ತದೆ. ಕೌಶಲ್ಯಾಭಿವೃದ್ಧಿ ಮತ್ತು ಜನರ ನಡುವಿನ ಸಂಬಂಧಗಳ ಬಲವರ್ಧನೆಗೆ ಉಭಯ ದೇಶಗಳು ಒತ್ತು ನೀಡುತ್ತಿದೆ. ದುಡಿಯುವ ಶಕ್ತಿಯ ಸಮಾನ ಹಂಚಿಕೆಯಿಂದ ಸಂಮೃದ್ಧ ವಾತಾವರಣ ಸೃಷ್ಟಿಯಾಗಲಿದೆ ಎಂದು ಪ್ರಧಾನಿ ತಿಳಿಸಿದರು.

**ಧ್ವನಿ : ಪ್ರಧಾನಮಂತ್ರಿ ನರೇಂದ್ರ ಮೋದಿ, ( ೩೪ ಸೆಕೆಂಡುಗಳು)**

ವಿಶ್ವ ಹಿಂದೂ ಭಾರತದತ್ತ ಕೇವಲ ಗಮನ ಹರಿಸುತ್ತಿಲ್ಲ, ಭಾರತದ ಲೆಕ್ಕಾಚಾರವನ್ನು ತೀರಾ ಹತ್ತಿರದಿಂದ ಗಮನಿಸುತ್ತಿದೆ. ಭಾರತ ಕೃತಕ ಬುದ್ಧಿಮತ್ತೆ, ಸೆಮಿಕಂಡಕ್ಟರ್, ಕ್ವಾಂಟಂ ಕಂಪ್ಯೂಟಿಂಗ್, ಜೈವಿಕ ತಂತ್ರಜ್ಞಾನ ಮತ್ತು ಬಾಹ್ಯಾಕಾಶ ವಲಯಗಳಲ್ಲಿ ದಿಟ್ಟ ಹಾಗೂ ಮಹತ್ವಾಕಾಂಕ್ಷೆಯ ಉಪಕ್ರಮಗಳನ್ನು ಕೈಗೊಂಡಿದ್ದು, ರಕ್ಷಣಾ ಮತ್ತು ಬಾಹ್ಯಾಕಾಶ ವಲಯದಲ್ಲಿ ಈಗಾಗಲೇ ಖಾಸಗಿ ಬಂಡವಾಳ ಹೂಡಿಕೆಗೆ ಅವಕಾಶ ಮಾಡಿಕೊಡಲಾಗಿದ್ದು, ಸದ್ಯದಲ್ಲೇ ಅಣುಇಂಧನ ವಲಯದಲ್ಲೂ ಸಹ ಖಾಸಗಿ ಅವರಿಗೆ ಬಂಡವಾಳ ತೊಡಗಿಸಲು ಅವಕಾಶ ನೀಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಪ್ರಧಾನಿ ಅವರು ಎರಡು ದಿನಗಳ ಜಪಾನ್ ಭೇಟಿಗಾಗಿ ಇಂದು ಬೆಳಿಗ್ಗೆ ಟೋಕಿಯೋಗೆ ಆಗಮಿಸಿದರು. ಭಾರತೀಯ ಸಮುದಾಯ ಪ್ರಧಾನಿ ಅವರನ್ನು ಸಾಂಪ್ರಾದಾಯಿಕವಾಗಿ ಸ್ವಾಗತಿಸಿತು.

**><><><><><><><><><**

೨೦೩೦ರವೇಳೆಗೆ ವಿಶ್ವದಲ್ಲಿ ಒಂದು ದಶಲಕ್ಷ ಸೆಮಿಕಂಡಕ್ಟರ್ ವೃತ್ತಿಪರರ ಕೊರತೆ ಎದುರಾಗಲಿದೆ ಎಂದು ಅಂದಾಜಿಸಲಾಗಿರುವ ಹಿನ್ನೆಲೆಯಲ್ಲಿ ಭಾರತ ಈ ಕೊರತೆಯನ್ನು ನಿವಾರಿಸುವ ಮಹತ್ವದ ಅವಕಾಶವನ್ನು ಬಳಸಿಕೊಳ್ಳಲಿದೆ ಎಂದು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ದೇಶದಲ್ಲಿ ಬಲಿಷ್ಠ ಪ್ರತಿಭಾ ಶಾಲೆಗಳನ್ನು ಸೃಷ್ಟಿಸುವ ಪ್ರಾಮುಖ್ಯತೆಯನ್ನು ಬಲವಾಗಿ ಪ್ರತಿಪಾದಿಸಿರುವ ಅವರು ಕೌಶಲ್ಯ ಹೊಂದಿದ ವೃತ್ತಿಪರರಿಗೆ ಜಾಗತಿಕ ಅವಕಾಶಗಳನ್ನು ಸೃಷ್ಠಿಸಿ ಕೊಡುವುದು ಭಾರತೀಯ ಸೆಮಿಕಂಡಕ್ಟರ್ ಮಿಷನ್‌ನ ಉದ್ದೇಶವಾಗಿದೆ ಎಂದು ತಿಳಿಸಿದ್ದಾರೆ. ಸರ್ಕಾರ ೨೭೦ ವಿಶ್ವವಿದ್ಯಾಲಯಗಳೊಂದಿಗೆ ಪಾಲುದಾರಿಕೆ ಮಾಡಿಕೊಂಡಿದ್ದು, ಅವುಗಳನ್ನು  ಅತ್ಯಾಧುನಿಕ ಸೆಮಿಕಂಡಕ್ಟರ್ ವಿನ್ಯಾಸ ಸಾಧನಗಳಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ. ೨೦೨೫ರಲ್ಲಿ ಈ ಸಾಧನಗಳನ್ನು ೧.೨ಕೋಟಿಗೂ ಅಧಿಕ ಮಂದಿ ಬಳಕೆ ಮಾಡಲಿದ್ದಾರೆ ಎಂದು ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

><><><><><><><><><

ಸುಪ್ರೀಂಕೋರ್ಟ್ ನೂತನ ನ್ಯಾಯಾಮೂರ್ತಿಗಳಾಗಿ ಅಲೋಕ್ ಅರಾಧೆ ಮತ್ತು ವಿ.ಎಂ.ಪಂಚೋಲಿ ಅವರು ಇಂದು ಪ್ರಮಾಣ ವಚನ ಸ್ವೀಕರಿಸಿದರು. ಸುಪ್ರೀಂಕೋರ್ಟ್ ನಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯ ನ್ಯಾಯಾಮೂರ್ತಿ ಬಿ.ಆರ್.ಗವಾಯಿ ನೂತನ ನ್ಯಾಯಾಮೂರ್ತಿಗಳಿಗೆ ಪ್ರಮಾಣವಚನ ಬೋಧಿಸಿದರು. ಇದರೊಂದಿಗೆ ಸುಪ್ರೀಂಕೋರ್ಟ್ ಖಾಲಿಯಿದ್ದ ಎರಡು ನ್ಯಾಯಾಮೂರ್ತಿಗಳ ಹುದ್ದೆ ಭರ್ತಿಯಾಗಿದ್ದು, ಮುಖ್ಯನ್ಯಾಯಾಮೂರ್ತಿ ಸೇರಿದಂತೆ ೩೪ ನ್ಯಾಯಾಮೂರ್ತಿಗಳು ಸದ್ಯ ಕಾರ್ಯನಿರ್ವಹಿಸುತ್ತಿದ್ದಾರೆ. ಸುಪ್ರೀಂಕೋರ್ಟ್‌ನ ಕೊಲಿಜಿಯಂ ಈ ಇಬ್ಬರು ನ್ಯಾಯಾಮೂರ್ತಿಗಳಿಗೆ ಸುಪ್ರೀಂಕೋರ್ಟ್‌ಗೆ ಬಡ್ತಿ ನೀಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಅದನ್ನು ಆಧರಿಸಿ ಕೇಂದ್ರ ಸರ್ಕಾರ ನ್ಯಾಯಾಮೂರ್ತಿಗಳ ನೇಮಕಾತಿ ಮಾಡಿತು.

><><><><><><><><><><

ಇಂದು ರಾಷ್ಟ್ರೀಯ ಕ್ರೀಡಾ ದಿನ. ಹಾಕಿ ಮಾಂತ್ರಿಕ, ದಂತಕತೆ ಮೇಜರ್ ಧ್ಯಾನ್‌ಚಂದ್ ಅವರ ಜನ್ಮ ದಿನಾಚರಣೆಯ ಸ್ಮರಣಾರ್ಥ ಪ್ರತಿ ವರ್ಷ ಆಗಸ್ಟ್ ೨೯ ರಂದು ರಾಷ್ಟ್ರೀಯ ಕ್ರೀಡಾದಿನವನ್ನಾಗಿ ಆಚರಿಸಲಾಗುವುದು. ೨೦೨೫ರ ರಾಷ್ಟ್ರೀಯ ಕ್ರೀಡಾ ದಿನದ ಘೋಷವಾಕ್ಯ "ಶಾಂತಿಯುತ ಮತ್ತು ಎಲ್ಲರನ್ನೂ ಒಳಗೊಂಡ ಸಮಾಜಗಳನ್ನು ಉತ್ತೇಜಿಸಲು ಕ್ರೀಡೆ" ಎಂಬುದಾಗಿದೆ. ಕ್ರೀಡಾದಿನದ ಅಂಗವಾಗಿ ಕೇಂದ್ರ ಯುವಜನ ವ್ಯವಹಾರ ಮತ್ತು ಕ್ರೀಡಾಸಚಿವ ಮಾನ್ಸೂಖ್ ಮಾಂಡವೀಯ ಧ್ಯಾನ್‌ಚಂದ್ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಧ್ಯಾನ್ ಚಂದ್ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು. ಇದೇ ವೇಳೆ ಸಚಿವರು ರಾಷ್ಟ್ರವ್ಯಾಪಿ ಇದೇ ತಿಂಗಳ ೩೧ರವರೆಗೆ ನಡೆಯಲಿರುವ ಫಿಟ್ ಇಂಡಿಯಾ ಭಾರತೀಯ ಕ್ರೀಡಾ ಅಭಿಯಾನಕ್ಕೆ ಚಾಲನೆ ನೀಡಿದರು.

**ಧ್ವನಿ : ಮನ್ಸೂಖ್ ಮಾಂಡವೀಯ (೩೭ ಸೆಕೆಂಡುಗಳು)**

"ಏಕ್ ಘಂಟಾ, ಖೇಲ್ ಕೆ ಮೈದಾನ್ ಮೈನ್" -ಆಟದ ಮೈದಾನದಲ್ಲಿ ಒಂದು ಗಂಟೆ ಅಭಿಯಾನದ ಮೂಲಕ ಜನರು ಪ್ರತಿದಿನ ಕನಿಷ್ಠ ಒಂದು ಗಂಟೆ ಹೊರಾಂಗಣ ಆಟಗಳು ಮತ್ತು ದೈಹಿಕ ಚಟುವಟಿಕೆಗೆ ಮೀಸಲಿಡಬೇಕು ಎಂಬುದನ್ನು ಪ್ರೋತ್ಸಾಹಿಸಲಾಗುವುದು.

><><><><><><><><><><

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ರಾಷ್ಟ್ರೀಯ ಕ್ರೀಡಾದಿನದ ಅಂಗವಾಗಿ ಇಂದು ಶುಭಾಶಯಗಳನ್ನು ಕೋರಿದ್ದಾರೆ. ಅವರು ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಭಾರತೀಯ ಹಾಕಿ ದಂತಕತೆ ಮೇಜರ್ ಧ್ಯಾನ್‌ಚಂದ್ ಅವರಿಗೆ ಗೌರವ ನಮನ ಸಲ್ಲಿಸಿದ್ದಾರೆ ಮತ್ತು ಧ್ಯಾನ್‌ಚಂದ್ ಅವರ ಗತವೈಭವ ಮುಂದಿನ ಪೀಳಿಗೆಗಳಿಗೆ ಸ್ಫೂರ್ತಿಯಾಗಿದೆ ಎಂದು ಹೇಳಿದ್ದಾರೆ.

ವಿಶ್ವದರ್ಜೆಯ ಕ್ರೀಡಾ ಮೂಲ ಸೌಕರ್ಯ ಸೃಷ್ಟಿಯ ಮೂಲಕ ತಳಮಟ್ಟದಲ್ಲಿ ಯುವ ಪ್ರತಿಭೆಗಳನ್ನು ಪೋಷಿಸುವ ಕೆಲಸ ಮಾಡಲಾಗುತ್ತಿದೆ, ಇದರಿಂದಾಗಿ ದೇಶದ ಕ್ರೀಡಾ ಆಯಾಮದಲ್ಲಿ ಗಮನಾರ್ಹ ಪರಿವರ್ತನೆ ಆಗಿದೆ ಎಂದು ಪ್ರಧಾನಿ ತಿಳಿಸಿದ್ದಾರೆ.

ಅಲ್ಲದೆ, ಕ್ರೀಡಾ ಜೇಷ್ಠತೆಯಲ್ಲಿ ಭಾರತವನ್ನು ಜಾಗತಿಕ ತಾಣವನ್ನಾಗಿ ಮಾಡಲು ಮತ್ತು ಮೂಲ ಸೌಕರ್ಯ ವೃದ್ಧಿಸಲು ಹಾಗೂ ಅಥ್ಲೀಟ್‌ಗಳಿಗೆ  ಎಲ್ಲಾ ರೀತಿಯ ನೆರವು ನೀಡಲು ಸರ್ಕಾರ ಬದ್ಧವಿದೆ ಎಂದು ಹೇಳಿದ್ದಾರೆ.

><><><><><><><><><><

ರಾಷ್ಟ್ರೀಯ ಕ್ರೀಡಾ ದಿನವಾದ ಇಂದು ೧೨ನೇ ಪುರುಷರ ಏಷ್ಯಾ ಹಾಕಿ ಕಪ್ ೨೦೨೫ ಪಂದ್ಯಾವಳಿ ಬಿಹಾರದ ರಾಜ್‌ಗಿರ್‌ನಲ್ಲಿ ಆರಂಭವಾಗಲಿದೆ. ಈ ಪಂದ್ಯಾವಳಿಯಲ್ಲಿ ಏಷ್ಯಾದ ಎಂಟು ಪ್ರಮುಖ ರಾಷ್ಟ್ರಗಳಾದ- ಭಾರತ, ಜಪಾನ್, ಚೀನಾ, ಕಝಾಕಿಸ್ತಾನ್, ಮಲೇಷ್ಯಾ, ಕೊರಿಯಾ, ಬಾಂಗ್ಲಾದೇಶ ಮತ್ತು ಚೈನೀಸ್ ತೈಪೆ  ಭಾಗವಹಿಸಲಿವೆ. ೨೦೨೬ ರ ಎಫ್‌ಐಎಚ್ ಹಾಕಿ ವಿಶ್ವಕಪ್‌ಗೆ ಅರ್ಹತಾ ಸುತ್ತಿನ ಪಂದ್ಯವಾಗಿಯೂ ಇದನ್ನು ಗುರುತಿಸಿರುವುದರಿಂದ ಈ ಪಂದ್ಯಾವಳಿ ಮಹತ್ವ ಪಡೆದುಕೊಂಡಿದೆ.  ಸೆಪ್ಟೆಂಬರ್ ೭ರ

ವರೆಗೆ  ನಡೆಯಲಿರುವ ಈ ಪಂದ್ಯಾವಳಿಯಲ್ಲಿ ಒಟ್ಟು ೨೪ ಪಂದ್ಯ ಆಡಲಾಗುತ್ತಿದೆ. ಆತಿಥೇಯ ಭಾರತ, ಜಪಾನ್, ಚೀನಾ ಮತ್ತು ಕಝಾಕಿಸ್ತಾನ್ ಜೊತೆಗೆ ಎ ಗುಂಪಿನಲ್ಲಿ ಸ್ಥಾನ ಪಡೆದಿದೆ. ಭಾರತ, ಇಂದು ಚೀನಾ ವಿರುದ್ಧ ತಮ್ಮ ಮೊದಲ ಪಂದ್ಯ ಆಡಲಿದ್ದು, ಆಗಸ್ಟ್ ೩೧ ರಂದು ಜಪಾನ್ ವಿರುದ್ಧ ಹಾಗೂ ಸೆಪ್ಟೆಂಬರ್ ೧ ರಂದು ಕಝಾಕಿಸ್ತಾನ್ ವಿರುದ್ಧದ ಅಂತಿಮ ಪೂಲ್ ಪಂದ್ಯವನ್ನು ಆಡಲಿದೆ.  ಈವರೆಗೆ ನಡೆದ ೧೧ ಆವೃತ್ತಿಗಳಲ್ಲಿ, ಹಾಲಿ ಚಾಂಪಿಯನ್ ದಕ್ಷಿಣ ಕೊರಿಯಾ ಪುರುಷರ ಏಷ್ಯಾ ಕಪ್‌ನಲ್ಲಿ ಅತ್ಯಂತ ಯಶಸ್ವಿ ತಂಡವಾಗಿದೆ.    ಭಾರತ ೨೦೦೩, ೨೦೦೭ ಮತ್ತು ೨೦೧೭ ರಲ್ಲಿ ಕಪ್ ಗೆದ್ದಿದೆ. ಹಾಕಿ ಪಂದ್ಯಗಳನ್ನು ನೋಡಲು ಆಕರ್ಷಿಸುವ ಸಲುವಾಗಿ ಹಾಕಿ ಇಂಡಿಯಾ ಎಲ್ಲಾ ಪಂದ್ಯಗಳಿಗೆ ಪ್ರವೇಶ ಉಚಿತ ಎಂದು ಘೋಷಿಸಿದೆ.

><><><><><><><><><><><><><